relevant portions of the report would be furnished;

(*c*) the action that the Government proposed to take in these cases ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) & (*c*) The report of the Committee is awaited.

ಶ್ರೀ ವಿ. ಮಸಿಯಪ್ಪ.—ಈ ಸಮಿತಿಯವರು investigation ನಡೆಸಿ ಆ ಬಗ್ಗೆ ಉಗ್ರಕಾರ್ಯಕ್ರಮ ಕೈಕೊಳ್ಳಲು authorise ಮಾಡಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ; ಆ ರೀತಿ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದಲ್ಲ.

ಶ್ರೀ ವಿ. ಮಸಿಯಪ್ಪ.—ಇದೇ ರೀತಿ ಬರಾಳ್ಳ ಸಮುದ್ರ ಕೆರೆ ಒಡೆದು ಹೋಗಿರುವ ವಿಚಾರವನ್ನು ತನಿಖೆ ಮಾಡುವ ಅವಶ್ಯಕತೆ ಸರ್ಕಾರಕ್ಕೆ ಕಂಡುಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇನ್ನಾವ ಕೆರೆಯ ವಿಚಾರದಲ್ಲಿಯೂ ಸದ್ಯಕ್ಕೆ ಅವಶ್ಯಕತೆ ಕಂಡುಬಂದಿಲ್ಲ ಎಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಬಿ. ಎಂ. ಶೀನಪ್ಪ.—ಈ ಕೆರೆಗಳು ಒಡೆದು ಹೋಗಿರುವುದರ ದೆಶೆಯಿಂದ ನಷ್ಟವಾಗಿರುವ ಮೊಬಲಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಸಮಿತಿಯವರು ವರದಿ ಕಳುಹಿಸಿದ ನಂತರ ಆ ವಿಚಾರ ಗೊತ್ತಾಗುತ್ತದೆ.

Anecut for Bheema River near Dalavoy.

Q.—277. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it is not a fact that an anecut has been proposed for Bheema River (Chikkakere) near Dalavoy Kodihalli, Malavalli Taluk;

(*b*) if so, what is the estimated cost and the area that can be irrigated; and

(*c*) the stage at which records stand ?

A.—Sri KADIDAL MANJAPPA (Minister for Revenue and Public Works).—

(*a*) No.

(*b*) & (*c*) Do not arise in view of reply to (*a*).

ಶ್ರೀ ಎಂ. ಚಿಕ್ಕಲಿಂಗಯ್ಯ.—ಬಹುಶಃ ನಾನು ಅಣೆಕಟ್ಟು ಎಂದು ಕೇಳಿರುವುದರಿಂದ ತಾವು "ಇಲ್ಲ" ಎಂಬುದಾಗಿ ಜವಾಬು ಕೊಟ್ಟಿರಬಹುದು. ಅದು ಒಂದು ರಿಜರ್ವಾಯರ್ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಲ್ಲ; ತಾವು ದಳವಾಯಿ ಹತ್ತಿರ ಎಂದು ಹೇಳ್ದಿದೀರಿ. ಅಲ್ಲಿ ಯಾವ ರಿಜರ್ವಾಯರ್ ಸಹ ಇಲ್ಲ. ಹಲಗೂರು ಹತ್ತಿರ ಕಟ್ಟ ಬೇಕೆಂಬ ಬಗ್ಗೆ ಆರ್ಡರಾಗಿತ್ತು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದನ್ನು ಈಗ ಕೈಬಿಟ್ಟಿರುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ; ಅದು ಇನ್ನೂ ಪುನಃಪರಿಶೀಲನೆಯಲ್ಲಿದೆ.

Expenditure on Anti-corruption and Cultural Development Departments.

Q.—428. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) the total expenditure incurred for the establishment and maintenance of the Departments of (i) Anti-corruption, (ii) Cultural Development in Mysore from their inception;

(*b*) the total amount of savings or gains got by the Government by the efficient working of the Anti-corruption Department in Mysore ?

A.—Sri KADIDAL MANJAPPA (Minister for Revenue and Public Works).—

(*a*) (i) Anti-corruption Department: Rs. 9,26,584.

(ii) Cultural and Literary Development in Mysore : Rs. 17,048.

(*b*) The work of the Department is not reflected only in savings or gains in money.

ಶ್ರೀ ಕೆ. ಪ್ರಭಾಕರ್.—ಸರ್ಕಾರದವರು ಈ ವಿಚಾರವನ್ನು ಲಾಭದೃಷ್ಟಿಯಿಂದ ಪರಿಗಣಿಸಿಲ್ಲವೆಂದು ಹೇಳಿದ್ದೀರಿ. ಈ ಡಿಪಾರ್ಟ್‌ಮೆಂಟಿನಿಂದ ಸರ್ಕಾರಕ್ಕೆ ಆಗಿರುವ savings ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—Savings ಎಂಬುದು indirect ಆಗಿ ಬಹಳ ಆಗಿದೆ. ಉದಾಹರಣೆಗೆ, ಕೆಲವು ಕಡೆ leakages ಆಗುತ್ತಿರುವುದು ಪತ್ತೆಯಾಗಿ ಅವುಗಳು ಸರ್ಕಾರದ ಗಮನಕ್ಕೆ ಬಂದಿವೆ. ಒಂದು ಸಂದರ್ಭದಲ್ಲಿ 80 ಸಾವಿರ ರೂಪಾಯಿಗಳ leakages, ಇನ್ನೊಂದು ಸಂದರ್ಭದಲ್ಲಿ 7,44,000 ರೂಪಾಯಿಗಳ leakages ಆಗುತ್ತಿದ್ದುದು ಗೊತ್ತಾಗಿ, ಈ ಮೂಲಕ ಅಪ್ರತ್ಯಕ್ಷ ಪ್ರಯೋಜನ ಸರ್ಕಾರಕ್ಕೆ ದೊರೆತಿದೆ.

Estimates Committee recommendations.

Q.—432. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) whether they have taken any action on the recommendations made by the Estimates Committee ;

(*b*) if not, why ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) Does not arise in view of reply to (*a*).

Sri K. PRABHAKAR.—I have no supplementaries to ask, Sir.

Anecut across Kumudvathi.

Q.—435. K. PRABHAKAR (Nelamangala—Scheduled Castes).—

Will the Government be pleased to state :—

what is the progress made with regard to the construction of a project across the river Kumudvathi near Marasarahalli in Nelamangala Taluk ?

A.—Sri KADIDAL MANJAPPA (Minister for Revenue and Public Works):—

The scheme is not proposed to be taken up as the construction of a tank across the Kumudvathi river near Marasarahalli affects the supply to Chamarajasagara which is supplying water to Bangalore City.

ಶ್ರೀ ಕೆ. ಪ್ರಭಾಕರ್.—ಈ ಯೋಜನೆಯನ್ನು ಕೈಗೊಳ್ಳಲಾಗುವುದಿಲ್ಲ, ಇದರಿಂದ ಬೆಂಗಳೂರು ನಗರಕ್ಕೆ ನೀರು ಸರಬರಾಯಿಮಾಡುತ್ತಿರುವ ಚಾಮರಾಜಸಾಗರಕ್ಕೆ ತೊಂದರೆಯಾಗುತ್ತೆಂದು ತಿಳಿಸಿದ್ದೀರಿ. ಇದನ್ನು ಯಾವಾಗ ತನಿಖೆ ಮಾಡಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳಲು ಸಾಧ್ಯವಿಲ್ಲ.

ಶ್ರೀ ಕೆ. ಪ್ರಭಾಕರ್.—ಈ ಬಗ್ಗೆ ಸರ್ವೆ ನಡಿಸಿದೆಯೆಂಬುದು ಖಚಿತವಾಗಿ ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ನಡೆಸಿದೆ.

ಶ್ರೀ ಕೆ. ಪ್ರಭಾಕರ್.—ಈ ಬಗ್ಗೆ ಪುನಃ ಪರಿಶೀಲನೆ ನಡೆಸುತ್ತೀರಾ ?

Mr. SPEAKER.—Take all these four questions together. But what is it that you are going to gain ? There is the last sentence in that answer. Next Question No. 527 and question No. 557 both being of the same nature, may be taken up together.

Land Reforms in the State.

Q.—527. Sri D. M. GOVINDA RAJU (Nelamangala).—

Will the Government be pleased to state :—

(*a*) whether they intend to bring into force any kind of Land Reforms in the State ;

(*b*) (i) whether they intend to abolish Jodi, Inam and Sarvamanya land tenures ;

(ii) if so, when ;

(*c*) whether any maximum limit would be fixed in respect of lands in the *hiduvali* of one individual ;

(*d*) the time required to bring this Reform into force ?

A.—Sri KADIDAL MANJAPPA (Minister for Revenue and Public Works).—

(*a*) and (*b*) (i) Yes.

(ii) As soon as the Bill is passed by the Assembly.

(*c*) & (*d*) It is under the consideration of Government.

Q.—557. Sri Y. M. CHANDRASEKHARIAH (Kadur).—

Will the Government be pleased to state : —

(*a*) whether it has come to their notice that the undivided families are put to hardship by the present method of distributing lands ;

(*b*) whether they would sanction lands at the rate of 5 acres for each, taking into account the number of spouses in each undivided family ?

A.—Sri KADIDAL MANJAPPA (Minister for Revenue and Public Works).—

(*a*) No.

(*b*) Yes. In deserving cases if the land is available in plenty.

ಶ್ರೀ ಡಿ. ಎಂ. ಗೋವಿಂದರಾಜು.—ಈ ಬಗ್ಗೆ ಮಸೂದೆಯನ್ನು ಈ ಅಧಿವೇಶನದಲ್ಲಿಯೇ ತರುತ್ತೀರೋ ಅಥವಾ ಮುಂದಿನ ಬಜೆಟ್ ಅಧಿವೇಶನದಲ್ಲಿ ತರುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಬಗ್ಗೆ ಈಗಾಗಲೇ ಸಭೆಯ ಅವಗಾಹನೆಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ವರದಿಯೊಂದನ್ನು ತರಲಾಗಿದೆ. ಆದಷ್ಟು ಜಾಗ್ರತೆ ಈ ಬಗ್ಗೆ ಕಾರ್ಯಕ್ರಮ ಕೈಗೊಳ್ಳಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಡಿ. ಎಂ. ಗೋವಿಂದರಾಜು.—ಜೋಡಿ ಗ್ರಾಮಕ್ಕೆ ಅನ್ವಯಿಸುವುದು, ಮತೀಯ ಸಂಬಂಧದ ಇನಾಂ ಗ್ರಾಮಕ್ಕೆ ಸಂಬಂಧಪಟ್ಟಿರುವುದು—ಈ ರೀತಿ ಯಾವ್ಯಾವುದಕ್ಕೆ ಸಂಬಂಧಪಟ್ಟ ಹಾಗೆ ಮಸೂದೆ ತರುತ್ತೀರಿ ?